ದ.ಕ. ಜಿಲ್ಲೆಯ ಉಪ್ಪಿನಂಗಡಿಯಲ್ಲಿ ಕೆ.ಇ.ಬಿ.ಯವರು ಕಾಡನ್ನು ಕಡಿದಿರುವುದು

ಶ್ರೀ ವಸಂತ ಬಂಗೇರ್.—ಅಧ್ಯಕ್ಷರೇ, ಅರಣ್ಯ ಸಚಿವರು ನಾನು ಹಿಂದೆ ಕೇಳಿದ ಪ್ರಶ್ನೆಗೆ ಉತ್ತರ ಕೊಡಲು ತಯಾರಿದ್ದಾರೆಂದು ಕಾಣುತ್ತದೆ. ಅವರಿಗೆ ಅನುಮತಿ ಕೊಡಿ ಎಂದು ಕೇಳುತ್ತೇನೆ.

ಅಧ್ಯಕ್ಷರು.—ಆಗಬಹುದು.

ಶ್ರೀ ಬಿ.ಎ. ಜೀವಿಜಯ.—ಅಧ್ಯಕ್ಷರೇ, ತಾರೀಖು ೭–೨–೧೯೮೫ರಂದು ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ರವರು ಉಪ್ಪಿನಂಗಡಿಯ ವಲಯ ಅರಣ್ಯ ಅಧಿಕಾರಿಯವರಿಗೆ ಒಂದು ಕಾಗದವನ್ನು ಬರೆದು ೧೧ ಕೆ.ವ್ಯಾ. ವಿದ್ಯುತ್ ವಾಹಕ ತಂತಿಯು ಹಾದು ಹೋಗುವ ಒಂದು ನಕ್ಷೆಯನ್ನು ಲಗತ್ತಿಸಿದ್ದರು. ಅರಣ್ಯ ಸಂರಕ್ಷಣಾ ಕಾಯಿದೆ ೧೯೮೦ರ ಪ್ರಕಾರ ಕೇಂದ್ರ ಸರ್ಕಾರದ ಅನುಮತಿ ಪಡೆಯಲು ಬೇಕಾದ ನಿಗದಿತ ನಕ್ಷೆ ಮತ್ತು ಇತರೆ ವಿವರಗಳನ್ನು ಮೇಲ್ಕಂಡ ಪತ್ರದಲ್ಲಿ ಲಗತ್ತಿಸಿರಲಿಲ್ಲ. ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಎಂಜಿನಿಯರ್‌ರವರ ಮೇಲ್ಕಂಡ ಲಿಖಿತ ಮನವಿಯ ಮೇರೆಗೆ ಉಪ್ಪಿನಂಗಡಿಯ ವಲಯ ಅಧಿಕಾರಿಯವರು ತಾರೀಖು ೧೫–೨–೧೯೮೫ರಂದು ರೇಖೆಯ ಸೆಕ್ಷನ್ ಅರಣ್ಯ ಪಾಲಕರವರಿಗೆ, ವಿದ್ಯುತ್‌ವಾಹಕ ತಂತಿಯಂ ಹಾದುಹೋಗಂವ ದಾರಿಯ ಕೆಳಗಡೆ ಬರುವ ಮರಗಳ ಸಂಖ್ಯೆಯನ್ನು ಎಣಿಸುವಂತೆ ಆದೇಶ ನೀಡಿದರು. ಈ ವಿವರವು ಕೇಂದ್ರ ಸರ್ಕಾರಕ್ಕೆ ಸಲ್ಲಿಸುವ ನಿಗದಿತ ನಮೂನೆಯಲ್ಲಿ ಸಲ್ಲಿಸಲು ಬೇಕಾಗುತ್ತದೆ. ಈ ಮಧ್ಯೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯ ಕಂಟ್ರಾಕ್ಟರ್‌ಗಳ ಕೆಲಸಗಾರರು ಶಿಬಾಜೆ ಮೀಸಲು ಅರಣ್ಯ ಪ್ರದೇಶದಲ್ಲಿ ೪೧ ಮರಗಳನ್ನು ಮತ್ತು ಬಫರ್ ಪ್ರದೇಶ ಮತ್ತು ಎ.ಡಬ್ಲ್ಯೂ.ಎಲ್. ಜಾಗದಲ್ಲಿ ೫೧೯ ಮರಗಳನ್ನು ಏಪ್ರಿಲ್ ೧೯೫೫ರಲ್ಲಿ ಕಡಿತಲೆ ಮಾಡಿದ್ದರು. ಉಪ್ಪಿನಂಗಡಿಯ ವಲಯ ಅರಣ್ಯಾಧಿಕಾರಿಯವರು ಈ ಕೆಲಸಗಾರರ ವಿರುದ್ಧ ಕಕ್ಷೀರು ನಂಬರು ೩ ಮತ್ತು ೪.೮೫–೮೬ ತಾರೀಖು. ೧೦–೪–೧೯೮೫ ರಂದು ಕೇಸು ದಾಖಲೆ ಮಾಡಿಕೊಂಡರು. ಕಡಿತಲೆ ಮಾಡಿದ ಮರಗಳನ್ನು ಅಮಾನತ್ತುಪಡಿಸಲಾಯಿತು ತಕ್ಷಣವೆ ಉಪ್ಪಿನಂಗಡಿಯ ವಲಯ ಅರಣ್ಯ ಅಧಿಕಾರಿಯವರು ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಎಂಜಿನಿಯರ್ ಕರ್ನಾಡಿಕ ವಿದ್ಯುಚ್ಛಕ್ತಿ ಮಂಡಳಿ, ಬೆಳ್ತಂಗಡಿ ಇವರಿಗೆ ಒಂದು ಕಾಗದ ಬರೆದು ಅಧಿಕೃತ ಪರವಾನಿಗೆ ಇಲ್ಲದೆ ಪುನಃ ಕಡಿತಲೆಗಳನ್ನು ಮಾಡಬಾರದೆಂದು ಸೂಚಿಸಿದರು. ಮತ್ತು ವಲಯ ಅರಣ್ಯಾಧಿಕಾರಿಯವರು ೨೦ ಅಂಶದ ಕಾರ್ಯಕ್ರಮದ ಅಧ್ಯಕ್ಷರು ಮತ್ತು ಬೆಳ್ತಂಗಡಿಯ ತಹಶೀಲ್ದಾರರವನಿಗೆ ನಡೆದ ಸಂಗತಿಗಳನ್ನು ವಿವರಿಸಿ ಒಂದು ಕಾಗದ ಬರೆದರು. ಈ ಕಾಗದದಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯವರು ವಿದ್ಯುದ್ವಾಹಕ ತಂತಿಯನ್ನು ಮೀಸಲು ಅರಣ್ಯದ ಮೂಲಕ ಹಾದು ಹೋಗುವುದನ್ನು, ಅರಣ್ಯ ಇಲಾಖೆಯ ಮತ್ತು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯವರು ಅಧಿಕಾರಿಗಳು ಜಂಟಿ ಸರ್ವೆ ಮಾಡಿದ್ದಲ್ಲಿ ತಪ್ಪಿಸಬಹುದಾಗುತ್ತೆಂದು ಸೂಚಿಸಿದ್ದರು. ಮಂಗಳೂರಿನ ಉಪ ಅರಣ್ಯ ಸಂರಕ್ಷಣಾಧಿಕಾರಿಯವರು, ಮಂಗಳೂರಿನ ಜಿಲ್ಲಾಧಿಕಾರಿಯವರಿಗೆ ಒಂದು ಅರೆ ಸರ್ಕಾರಿ ಪತ್ರ ಬರೆದು ಮೇಲ್ಕಂಡ ಜಾಗದ ಜಂಟಿ ತಪಾಸಣೆಯನ್ನು ೨೦ ಅಂಶ ಕಾರ್ಯಕ್ರಮವನ್ನು ಶೀಘ್ರಗೊಳಿಸುವ ಅಂಗವಾಗಿ ಮಾಡುವಂತೆ ಕೋರಿಕೊಂಡರು ೧೫–೭–೮೫ ರಂದು ಉಪ್ಪಿನಂಗಡಿ ವಲಯ ಅರಣ್ಯಾಧಿಕಾರಿಯವರು ೧೧ ಕೆ.ವ್ಯಾ. ವಿದ್ಯುದ್ವಾಹಕ ತಂತಿಯಂ ಮಿಯಾರ್ ಮೀಸಲು ಅರಣ್ಯ ಪ್ರದೇಶ, ಬಫರ್ ಪ್ರದೇಶ ಮತ್ತು ಎ.ಡಬ್ಲ್ಯೂ.ಎಲ್ ಜಮೀನಿನ ಮೂಲಕ ಹಾದುಹೋಗುವ ಪ್ರದೇಶದಲ್ಲಿ ಬರುವ ಮರಗಳ ಪಟ್ಟಿಯನ್ನು ಕಳುಹಿಸಿದರು. ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಂಗಳೂರು ಮತ್ತು ಎಕ್ಸಿಕ್ಯೂಟಿವ್ ಎಂಜಿನಿಯರ್‌ರವರು ಮೇಲ್ಕಂಡ ಜಾಗದ ಜಂಟಿ ತಪಾಸಣೆಯನ್ನು ತಾರೀಖು ೭–೮–೧೯೮೫ ರಂದು ಮಾಡಿದರು. ಮತ್ತು ಹಾಗೆ ಮಾಡುವಾಗ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯವರು ಕರ್ನಾಟಕ ಅರಣ್ಯ ಇಲಾಖೆಯವರ ಅನುಮತಿಯಿಲ್ಲದೆ ಕೆಲವು ಅಧಿಕ ಮರಗಳನ್ನು ಕಡಿತಲೆ ಮಾಡಿದ್ದು ಗಮನಕ್ಕೆ ಬಂತು. ಉಪಅರಣ್ಯ ಸಂರಕ್ಷಣಾಧಿಕಾರಿ, ಮಂಗಳೂರು ಇವರ ಆದೇಶದ ಮೇರೆಗೆ ಉಪ್ಪಿನಂಗಡಿಯ ವಲಯ ಅರಣ್ಯಾಧಿಕಾರಿಯವರು ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯ ಕಂಟ್ರಾಕ್ಟ್‌ದಾರರ ವಿರುದ್ಧ ಹೊಸ ಕಡಿತಲೆ ಮಾಡಿದ ಬಗ್ಗೆ ಕಕ್ಷೀರು ನಂ. ೭ಕೆ.೭೬,೭೭, ೮೫–೮೬ ತಾರೀಖು ೭–೮–೮೫ ರಂದು ಕೇಸು ದಾಖಲು ಮಾಡಿಕೊಂಡರು ಈ ಸಮಯದಲ್ಲಿ ೧೨೨ ಮರಗಳನ್ನೂ ಕಡಿತಲೆ ಮಾಡಿದ್ದು ಕಂಡುದ್ದು ಒಟ್ಟು ಕಡಿತಲೆ ಆದ ಮರಗಳ ಸಂಖ್ಯೆ ೨೧೪ಕ್ಕೆ ಏರಿತು. ಅವುಗಳಲ್ಲಿ ಶಿಬಾಜೆ ಮತ್ತು ಮಿಯಾರ್ ಮೀಸಲು ಅರಣ್ಯ ಪ್ರದೇಶದಲ್ಲಿ ೪೫ ಮರಗಳನ್ನು ಮತ್ತು ಬಫರ್ ಮತ್ತು ಎ.ಡಬ್ಲ್ಯೂ.ಎಲ್ ಜಾಗದಲ್ಲಿ ಉಳಿದ ೧೬೯ ಮರಗಳನ್ನು ಕಡಿಯಂ

ಲಾಗಿತ್ತು. ಉಪ ಅರಣ್ಯ ಸಂರಕ್ಷಣಾಧಿಕಾರಿ ಮಂಗಳೂರು ಇವರು ಉಪ್ಪುನಂಗಡಿ ತಾಲ್ಲೂಕು ಅರಣ್ಯಾಧಿಕಾರಿಯವರಿಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಅಥವಾ ಕಂಟ್ರಾಕ್ಟ್‌ದಾರರ ಕೆಲಸಗಾರರನ್ನೂ ಈ ಜಾಗಕ್ಕೆ ಬರದಂತೆ ನಿರ್ಭಂದ ನೀಡಲು ಆದೇಶ ನೀಡಿದರು.

ಅರಣ್ಯ ಸಂರಕ್ಷಣಾ ಕಾಯಿದೆ ೧೯೮೦ರ ಪರಿಚ್ಛೇದ-೨ರ ಪ್ರಕಾರ ಕಾಡು ಪ್ರದೇಶವನ್ನು ಅರಣ್ಯೇತರ ಉದ್ದೇಶಗಳಿಗಾಗಿ ಬಳಸುವುದಕ್ಕೆ ಕೇಂದ್ರ ಸರ್ಕಾರದ ಪೂರ್ವಭಾವಿ ಅನುಮತಿಯು ಅವಶ್ಯಕವಾಗಿದ್ದು ಸದರಿ ಕೇಸಿನಲ್ಲಿ ತಾರೀಖು ೭-೨-೧೯೮೫ ರಂದು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ, ಬೆಳ್ತಂಗಡಿಯ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಎಂಜಿನಿಯರ್ ಅವರು ಕೇವಲ ಒಂದು ಮಾನವಿಯನ್ನು ಮಾತ್ರ ಸಲ್ಲಿಸಿ ಇದಕ್ಕೆ ಬೇಕಾದ ಇತರ ವಿಧಿಗಳನ್ನು ಅಂದರೆ, ನಿಗದಿತ ನಮೂನೆಯಲ್ಲಿ ವಿವರಗಳು, ವಿದ್ಯುತ್‌ವಾಹಕ ತಂತಿಯ ಹಾದುಹೋಗುವ ದಾರಿಯ ನಕ್ಷೆ ಮತ್ತು ಕಡಿತಲೆ ಮಾಡಬೇಕಾಗಿರುವ ಮರಗಳ ಪಟ್ಟಿಗಳನ್ನು ಸಲ್ಲಿಸಲಿಲ್ಲ. ಅದರ ಬದಲು ಅರಣ್ಯ ಸಂರಕ್ಷಣಾ ಕಾಯಿದೆ ೧೯೮೦ರ ನಿಯಮಗಳನ್ನು ಉಲ್ಲಂಘಿಸಿ ಸ್ವತಂ ಮರಗಳನ್ನು ಕಡಿತಲೆ ಮಾಡಿದ್ದಾರೆ. ನಮ್ಮ ರಾಜ್ಯ ಸರ್ಕಾರಕ್ಕೂ ಸಹ ಕೇಂದ್ರ ಸರ್ಕಾರದ ಅನುಮತಿಯಿಲ್ಲದೆ ಅರಣ್ಯ ಪ್ರದೇಶವನ್ನು ಅರಣ್ಯೇತರ ಉದ್ದೇಶಗಳಿಗಾಗಿ ಬಳಸಲು ನೀಡುವ ಅಧಿಕಾರವಿರುವುದಿಲ್ಲ, ಆದರಿಂದ ಮಂಗಳೂರಿನ ಉಪ ಅರಣ್ಯ ಸಂರಕ್ಷಣಾಧಿಕಾರಿಯವರು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಕಂಟ್ರಾಕ್ಟ್‌ದಾರರ ವಿರುದ್ಧ ಕೇಸು ದಾಖಲು ಮಾಡಿರುವುದು ಮತ್ತು ಮೀಸಲು ಅರಣ್ಯ ಪ್ರದೇಶದಲ್ಲಿ ಆಪರು ತಮ್ಮ ಕಾರ್ಯವನ್ನು ಮುಂದುವರಿಸದಂತೆ ತಡೆ ಹಾಕಿದ್ದಾರೆ.

ಶ್ರೀ ಕೆ. ವಸಂತ ಬಂಗೇರ್.—ಅಧ್ಯಕ್ಷರೆ. ಮಾನ್ಯ ಮಂತ್ರಿಗಳು ಹೇಳುತ್ತಿರುವುದು ನೂರಕ್ಕೆ ನೂರು ಸತ್ಯಕ್ಕೆ ದೂರವಾದುದು ಅವರು ಕರ್ನಾಟಕ ವಿದ್ಯುತ್ ಮಂಡಲಿಯ ಕಂಟ್ರಾಕ್ಟರುದಾರರ ವಿರುದ್ಧ ಕೇಸು ದಾಖಲು ಮಾಡಿರುವುದರ ಬಗ್ಗೆ ಹೇಳುತ್ತಿದ್ದಾರೆ. ಇದು ಸರಿಯಾದುದಲ್ಲ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ತಪ್ಪಿ ಹೇಳಿಕೆಯನ್ನು ಪಾಂಗಿಸಲಿ.

ಶ್ರೀ ಬಿ.ಎ ಜೀವಿಜಯ.—ಈಗಲೂ ಕೂಡಾ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯವರು ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಂಗಳೂರು ಇವರಿಗೆ ಬೇಕಾದ ವಿವರಗಳು ಮತ್ತು ನಕ್ಷೆಯನ್ನು ಕೊಟ್ಟಲ್ಲಿ ಅದನ್ನು ಮುಂದಿನ ಕ್ರಮಕ್ಕಾಗಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿ ಅನುಮತಿ ಪಡೆಯಲು ಸಹಾಯಕವಾಗಬಹುದು. ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯ ಕೆಳದರ್ಜೆಯ ನೌಕರರು ಬಹುಶಃ ಅರಣ್ಯ ಸಂರಕ್ಷಣಾ ಕಾಯಿದೆ ೧೯೮೦ರ ನಿಯಮಗಳ ಅರಿವಿಲ್ಲದೆ ಕಡಿತಲೆ ಮಾಡಿರಬೇಕು. ಉಪ ಅರಣ್ಯ ಸಂರಕ್ಷಣಾಧಿಕಾರಿ ಮಂಗಳೂರು ಇವರ ಮೇಲೆ ಹಲವು ಲಕ್ಷ ರೂಪಾಯಿಗಳ ಮೌಲ್ಯದ ನಷ್ಟವನ್ನು ಅರಣ್ಯ ಪ್ರದೇಶದಿಂದ ಕಳ್ಳಸಾಗಾಣಿಕೆ ಮಾಡಲು ಅನುಮತಿ ನೀಡಿದರೆಂದು ಆರೋಪ ಪಡಿಸಲಾಗಿದೆ. ಇದು ನಿಜವಲ್ಲ, ತದ್ವಿರುದ್ಧವಾಗಿ ಅರಣ್ಯ ಇಲಾಖೆಯವರು ಅಕ್ರಮ ಕಡಿತಲೆ ಹಾಗೂ ಕಳ್ಳಸಾಗಾಣಿಕೆಯಾದ ಪ್ರಸಂಗಗಳಲ್ಲಿ ಸೂಕ್ತ ಕ್ರಮಗಳನ್ನು ತೆಗೆದುಕೊಂಡು ಎಲ್ಲಾ ಕೇಸುಗಳನ್ನು ದಾಖಲು ಮಾಡಿಕೊಳ್ಳಲಾಗಿದೆ. ಈ ಬಗ್ಗೆ ಆಕ್ರಮವಾಗಿ ಉರುವಲು ಕಟ್ಟಿಗೆಯನ್ನು ಸಾಗಿಸುತ್ತಿದ್ದ ಒಂದು ಲಾರಿಯನ್ನು ಸಹ ಸರ್ಕಾರಕ್ಕೆ ಮುಟ್ಟುಗೋಲು ಹಾಕಲಾಗಿದೆ.

ವಿದ್ಯುತ್ ವಾಹಕ ತಂತಿಯನ್ನು ಹೂಣಸೂರು ಮತ್ತು ಪೊನ್ನಂಪೇಟೆ ಮಾರ್ಗದಲ್ಲಿ ಎಳೆಯಲು ಅರಣ್ಯ ಇಲಾಖೆಯವರು ಅರಣ್ಯ ಸಂರಕ್ಷಣಾ ಕಾಯಿದೆ ೧೯೮೦ರ ಮೇರೆಗೆ ಕೇಂದ್ರ ಸರ್ಕಾರದ ಅನುಮತಿಯನ್ನು ನಿರೀಕ್ಷಿಸಿ ಕರ್ತವ್ಯವನ್ನು ಮುಂಚಿತವಾಗಿಯೇ ತೆಗೆದುಕೊಂಡ ದಿಸೆಯಲ್ಲಿ ಭಾರತ ಸರ್ಕಾರವು ಕರ್ನಾಟಕದ ಅರಣ್ಯ ಇಲಾಖೆಯ ಅಧಿಕಾರಿಗಳ ಮೇಲೆ ಇಲಾಖಾ ಕ್ರಮವನ್ನು ತೆಗೆದುಕೊಳ್ಳಲು ಆಗ್ರಹಪಡಿಸಿದ್ದಾರೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಅರಣ್ಯ ಇಲಾಖೆಯು ಸಾರ್ವಜನಿಕರ ಹಿತದೃಷ್ಟಿಯಿಂದ ರಚನಾತ್ಮಕ ಕಾರ್ಯವನ್ನು ತೆಗೆದುಕೊಂಡಲ್ಲಿ ಕೂಡ ಭಾರತ ಸರ್ಕಾರದ ಅರಣ್ಯ ಸಂರಕ್ಷಣಾ ಕಾಯಿದೆ ೧೯೮೦ರ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆಯು ಭಾರತ ಸರ್ಕಾರದ ಅನುಮತಿಯಿಲ್ಲದೆ ಕಾರ್ಯ ಮಾಡಲು ವಿಧಿಯಿಲ್ಲದಾಗಿದೆ, ಇದನ್ನು ಕೆಲವು ಸದಸ್ಯರ ಸಂಶಯ ನಿವಾರಣೆ ಮಾಡಲು ಹೇಳುತ್ತಿದ್ದೇನೆ ಸ್ಥಳೀಯ ಕಾನೂನನ್ನು ಪಾಲಿಸುವುದು ಪ್ರತಿಯೊಬ್ಬ ಪ್ರಜೆಯ ಆದ್ಯ ಕರ್ತವ್ಯ

ಸನ್ಮಾನ್ಯ ಶಾಸಕರು ೧೯೮೦ರ ಕೇಂದ್ರ ಸರ್ಕಾರದ ಕಾಯಿದೆಯನ್ನು ಉಲ್ಲಂಘಿಸಿ, ಅರಣ್ಯೇತರ ಕೆಲಸಕ್ಕಾಗಿ ಕಾಡನ್ನು ಉಪಯೋಗ ಮಾಡಬಾರದು ಎಂದು ತಿಳಿದರೆ ಬಹಳ ಒಳ್ಳೆಯದಾಗುತ್ತವೆ. ಕಾನೂನಿನ ಚೌಕಟ್ಟಿನಲ್ಲಿ ಕೆಲಸ ಮಾಡುವ ಅರಣ್ಯಾಧಿಕಾರಿಗಳನ್ನು ಮಾನಸಿಕವಾಗಿ ಇಕ್ಕಟ್ಟಿಗೆ ಸಿಲುಕಿಸುವಂತಹ ಯಾವ ಕೆಲಸವನ್ನು ಮಾಡದಿರುವುದು ಎಲ್ಲರಿಗೂ ಒಳ್ಳೆಯದು. ಮಂಗಳೂರಿನ ಉಪ ಅರಣ್ಯಾಧಿಕಾರಿಗಳ ಮೇಲೆ ಹೊರಿಸಿರುವ ಆಪಾದನೆ ಸತ್ಯಕ್ಕೆ ದೂರವಾಗಿದೆ.

ಮನವಿಗಳು

ಆಧ್ಯಕ್ಷರು.—ಈಗ ಮುಂದಿನ ಕಾರ್ಯಕ್ರಮ, ವಿರೋಧ ಪಕ್ಷದ ನಾಯಕರ ಸ್ಥಾನಮಾನದ ಬಗ್ಗೆ

ಶ್ರೀ ಎಸ್. ಬಂಗಾರಪ್ಪ —ಮಾನ್ಯ ಸಭಾಧ್ಯಕ್ಷರೇ, ನಾನು ಯಾವುದೇ ನಿಯಮಾವಳಿ ಪ್ರಕಾರ ಪ್ರಸ್ತಾಪ ಮಾಡದೇ, ತಮ್ಮ ಅನುಮತಿಯ ಮೇಲೆ ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಇದು ವಿರೋಧ ಪಕ್ಷಕ್ಕೆ ಸಂಬಂಧಪಟ್ಟ ಪ್ರಶ್ನೆಯಾಗಿದೆ. ನಾವು ನಮ್ಮ ಕರ್ತವ್ಯವನ್ನು ಮಾಡಬೇಕಾದರೆ ನಾವು ಕೆಲವು ನಿಯಮಾವಳಿಗಳನ್ನು ಮಾಡಿಕೊಂಡಿದ್ದೇವೆ.

ಆಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ, ನಿರ್ಣಯದ ಬಗ್ಗೆ ಮಾತನಾಡುತ್ತಿದ್ದೀರಾ?

ಶ್ರೀ ಎಸ್. ಬಂಗಾರಪ್ಪ —ಇದು ನಿರ್ಣಯದ ವಿಷಯ ಅಲ್ಲ. ಇದು ಬೇರೆ ವಿಷಯ. ವಿರೋಧ ಪಕ್ಷದ ನಾಯಕರ ಸ್ಥಾನಮಾನ ಒಬ್ಬ ಸಂಪುಟ ದರ್ಜೆಯ ಮಂತ್ರಿಯವರ ಸ್ಥಾನ ಮಾನಕ್ಕೆ ಸರಿಸಮಾನವಾದುದೆಂದು ಕಾನೂನು ಮಾಡಿದ್ದು ಈಗಲ್ಲ. ಮೊದಲಿನಿಂದಲೂ, ನಮ್ಮ ಸರ್ಕಾರ ಅಧಿಕಾರದಲ್ಲಿ ಇದ್ದಾಗಲೂ ಇದನ್ನು ಮಾಡಿರತಕ್ಕದ್ದು ಇದೆ. ಮೇಲ್ಮನೆ ಇರಬಹುದು, ಕೆಳಮನೆ ಇರಬಹುದು, ಒಂದು ಕಾನೂನು ಮಾಡಿ ವಿರೋಧ ಪಕ್ಷದ ನಾಯಕರಿಗೆ ಸಂಪುಟ ದರ್ಜೆ ಮಂತ್ರಿಗಳಿಗೆ ನೀಡುವ ಸೌಕರ್ಯಗಳನ್ನು ಇವರಿಗೂ ಕೂಡಾ ನೀಡತಕ್ಕದ್ದು ಎಂದು ವಿಚಾರ ಇದೆ, ಹಿಂದೆ ಶ್ರೀಮಾನ್ ಲಕ್ಷ್ಮಿ ಸಾಗರ್ ಅವರು ಮಾನ್ಯ ಬೊಮ್ಮಾಯಿಯವರು. ಮಾನ್ಯ ದೇವೇಗೌಡರು ಇವರೆಲ್ಲಾ ವಿರೋಧ ಪಕ್ಷದ ನಾಯಕರಾಗಿದ್ದರು. ಮಾನ್ಯ ದೇವೇಗೌಡರು ವಿರೋಧ ಪಕ್ಷದ ನಾಯಕರಾಗಿದ್ದಾಗ ಈ ಕಾನೂನು ಇತ್ತೋ ಏನೋ ನನಗೆ ಸರಿಯಾಗಿ ಗೊತ್ತಿಲ್ಲ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಅವರು ಸೌಲಭ್ಯಗಳನ್ನು ಪಡೆದುಕೊಂಡಿರಲಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಹೌದು ಅವರು ಆ ಸೌಲಭ್ಯಗಳನ್ನು ಪಡೆದುಕೊಂಡಿರಲಿಲ್ಲ ಎಂದು ಕಾಣುತ್ತದೆ. ಈ ಕಡೆ ಇರುವ ಮಾನ್ಯ ಮೊಯ್ಲಿಯವರೂ ವಿರೋಧ ಪಕ್ಷದ ನಾಯಕರಾಗಿದ್ದರು. ನಂತರ ನಾನು ಈಗ ವಿರೋಧ ಪಕ್ಷದ ನಾಯಕನಾಗಿದ್ದೇನೆ. ಇಪ್ಪತ್ತು ಒಬ್ಬ ಸಂಪುಟ ದರ್ಜೆ ಸಚಿವರಿಗೆ ಏನು ಸೌಕರ್ಯ ಕೊಡುತ್ತಾರೋ ಅದನ್ನು ವಿರೋಧ ಪಕ್ಷದ ನಾಯಕರಿಗೂ ಒದಗಿಸಿಕೊಡಬೇಕು ಎನ್ನತಕ್ಕದ್ದು ಇಲ್ಲಿ ಪ್ರಶ್ನೆ ಇದೆ.

ನಾನು ಸೌಲಭ್ಯಗಳಿಗೋಸ್ಕರ ಮಾತನಾಡುತ್ತಿಲ್ಲ. ನಮ್ಮ ಕರ್ತವ್ಯವನ್ನು ನಿರ್ವಹಣೆ ಮಾಡತಕ್ಕಂತಹ ಸಂದರ್ಭದಲ್ಲಿ ಕಾನೂನು ಪ್ರಕಾರ ಇರುವಂತಹ ಸೌಲಭ್ಯಗಳು ಇದ್ದರೆ ಒಳ್ಳೆಯದು ಎನ್ನತಕ್ಕಂತಹ ಒಂದು ತೀರ್ಮಾನವನ್ನು ಈ ಸದನವೇ ತೆಗೆದುಕೊಂಡಿದೆ. ಆ ರೀತಿಯ ಸೌಲಭ್ಯಗಳು ಹಿಂದಿನಿಂದಲೂ ನಡೆದಿವೆ. ನಾನು ಯಾವುದೇ ಅನುಕೂಲಗಳನ್ನು ಕೇಳುವುದಕ್ಕೆ ಹೋಗುವವನಲ್ಲ, ಮನೆ ಕೇಳುವುದಕ್ಕೆ ಹೋಗುವವನಲ್ಲ. ಇದೇ ಮನೆ ಬೇಕು, ಅದೇ ಮನೆ ಬೇಕು ಎಂಬುದಾಗಿ ಕೇಳತಕ್ಕಂಥವನಲ್ಲ. ಈ ಸೌಲಭ್ಯಗಳನ್ನು ಒದಗಿಸಿಕೊಡುವ ಪ್ರಯತ್ನದಲ್ಲಿ ನೀವೂ ಕೂಡ ಭಾಗಿಯಾಗಿದ್ದೀರಿ ಕೊಡಬಾರದು ಎಂದಲ್ಲ. ಕೊಡಬೇಕು ಎಂದು ಹೇಳುವುದರಲ್ಲಿ. ಅದೇ ರೀತಿ ತಕ್ಷಣವೇ ಕೊಡಿ ಎಂಬ ಮಾತನ್ನು ಹೇಳಿದ್ದೀರಿ. ಶ್ರೀಮಾನ್ ವೀರಣ್ಣನವರು ಇರತಕ್ಕಂಥ ಮನೆ ನನಗೆ ಅಲಾಟ್ ಆದಾಗ ಅವರು ಇರುವಂತಹ ಮನೆಯನ್ನು ಕಾಲಿ ಮಾಡಿಸಿ ನನಗೆ ಕೊಡಿಸುವುದು ಬೇಡ, ಅದು ಸರ್ಕಾರಿ ಬಂಗಲೆ, ಬೇರೆ ಯಾವುದನ್ನಾದರೂ ಅಲಾಟ್ ಮಾಡಿ ಎಂಬುದಾಗಿ ಹೇಳಿದ್ದೇನೆ. ಈಗ ಅನೇಕ ತೊಂದರೆ